# ತುಮಕೂರು ವಿಶ್ವವಿದ್ಯಾನಿಲಯ
# ಶೈಕ್ಷಣಿಕ ವಿಭಾಗ
# ಪ್ರಶ್ನೋತ್ತರಗಳು

1. ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಯಾವ ಯಾವ ವಿಷಯಗಳಲ್ಲಿ ಪದವಿ ಪಡೆಯಬಹುದು?

- ತುಮಕೂರು ವಿಶ್ವವಿದ್ಯಾನಿಲಯಕ್ಕೆ ೨ ಘಟಕ ಕಾಲೇಜುಗಳು ಹಾಗೂ ೮೭ ಸಂಯೋಜಿತ ಕಾಲೇಜುಗಳಿದ್ದು, ಇವುಗಳಲ್ಲಿ ೧೬ ಶಿಕ್ಷಣ ಕಾಲೇಜುಗಳಿವೆ. ಉಳಿದಂತೆ ೪ ಸ್ನಾತಕೋತ್ತರ ಕಾಲೇಜುಗಳಿವೆ. ಪ್ರತೀ ಕಾಲೇಜಿನಲ್ಲಿಯೂ ಬೋಧಿಸಲಾಗುವ ವಿಷಯಗಳ ವಿವರವನ್ನು ವಿವಿ ಜಾಲತಾಣದಲ್ಲಿ ಗಮನಿಸಬಹುದು.

2. ವಿವಿಧ ಪ್ರೋಗ್ರಾಂಗಳಿಗೆ ಇರುವ ಶುಲ್ಕಗಳೆಷ್ಟು?

- ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ಪ್ರೋಗ್ರಾಂಗಳಿಗೆ ಇರುವ ಶುಲ್ಕಗಳ ವಿವರವನ್ನೂ ವಿವಿ ಜಾಲತಾಣದಲ್ಲಿ ಗಮನಿಸಬಹುದು.

3. ಕಾಲೇಜು ಬದಲಾವಣೆ ಯಾರು ಮಾಡಿಕೊಳ್ಳಬಹುದು?

- ತುಮಕೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ ಯಾವುದೇ ಪದವಿ ಕಾಲೇಜುಗಳಲ್ಲಿ ಸ್ನಾತಕ ಮೊದಲನೇ ಅಥವಾ ಎರಡನೇ ವರ್ಷ ಪೂರ್ಣಗೊಳಿಸಿಕೊಂಡ ಯಾವುದೇ ವಿದ್ಯಾರ್ಥಿ ಕಾಲೇಜು ಬದಲಾವಣೆ ಮಾಡಿಕೊಳ್ಳಬಹುದು.

4. ಕಾಲೇಜು ಬದಲಾವಣೆ ಮಾಡಿಕೊಳ್ಳಬೇಕಾದರೆ ಹಿಂದಿನ ವರ್ಷಗಳ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರಬೇಕೆ?

- ತುಮಕೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ ಯಾವುದೇ ಪದವಿ ಕಾಲೇಜುಗಳಲ್ಲಿ ಸ್ನಾತಕ ಮೊದಲನೇ ಅಥವಾ ಎರಡನೇ ವರ್ಷ ಪೂರ್ಣಗೊಳಿಸಿಕೊಂಡ ಯಾವುದೇ ವಿದ್ಯಾರ್ಥಿ ಹಿಂದಿನ ವರ್ಷಗಳ ಪರೀಕ್ಷೆಗಳಲ್ಲಿ ಉತ್ತೀರ್ಣನಾಗಿರದಿದ್ದರೂ ಕಾಲೇಜು ಬದಲಾವಣೆ ಮಾಡಿಕೊಳ್ಳಬಹುದು.

5. ಈ ಹಿಂದೆ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಓದಿದ ವಿದ್ಯಾರ್ಥಿಗಳೂ ಕಾಲೇಜು ಬದಲಾಯಿಸಿಕೊಂಡು ತುಮಕೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಕಾಲೇಜುಗಳಿಗೆ ವರ್ಗಾವಣೆ ಪ್ರವೇಶ ಪಡೆಯಬಹುದೇ?

- ಈ ಹಿಂದೆ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಓದಿದ ವಿದ್ಯಾರ್ಥಿಗಳು ಹಿಂದಿನ ಪರೀಕ್ಷೆಗಳಲ್ಲಿ ಉತ್ತೀರ್ಣರಾದರೆ ಮಾತ್ರ ಕಾಲೇಜು ಬದಲಾಯಿಸಿಕೊಂಡು ತುಮಕೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಕಾಲೇಜುಗಳಿಗೆ ವರ್ಗಾವಣೆ ಪ್ರವೇಶ ಪಡೆಯಬಹುದು.

6. ಹಿಂದಿನ ಸೆಮಿಸ್ಟರ್ ಪರೀಕ್ಷೆ ಬರೆಯದೆ ಮುಂದಿನ ಸೆಮಿಸ್ಟರ್‌ಗೆ ಪ್ರವೇಶ ಪಡೆಯಬಹುದೇ?

- ಹಿಂದಿನ ಸೆಮಿಸ್ಟರ್‌ನಲ್ಲಿ ನಿಗದಿತ ಹಾಜರಾತಿ ಇದ್ದರೆ ಪರೀಕ್ಷೆ ಬರೆಯದೇ ಇದ್ದರೂ ಮುಂದಿನ ಸೆಮಿಸ್ಟರ್‌ಗೆ ಪ್ರವೇಶ ಪಡೆಯಬಹುದು. ಹಾಜರಾತಿಯ ಕೊರತೆ ಇದ್ದರೆ ಅದೇ ವರ್ಷಕ್ಕೆ ಮರುಪ್ರವೇಶ ಪಡೆಯಬೇಕಾಗುತ್ತದೆ.

7. ಕಾಲೇಜು ಬದಲಾವಣೆಗೆ ಅನುಸರಿಸಬೇಕಾದ ಕ್ರಮಗಳೇನು?

- ವಿದ್ಯಾರ್ಥಿಯು ತಾನು ಓದುತ್ತಿರುವ ಕಾಲೇಜು ಹಾಗೂ ವರ್ಗಾವಣೆ ಪ್ರವೇಶ ಬಯಸುವ ಕಾಲೇಜು ಎರಡರಿಂದಲೂ ನಿರಪೇಕ್ಷಣಾ ಪತ್ರ ಪಡೆದು ವಿಶ್ವವಿದ್ಯಾನಿಲಯವನ್ನು ಸಂಪರ್ಕಿಸಿ, ಅನುಮತಿ ಪಡೆಯಬಹುದು. ಇದಕ್ಕಾಗಿ ನಿರ್ದಿಷ್ಟ ಶುಲ್ಕವನ್ನು ವಿಶ್ವವಿದ್ಯಾನಿಲಯಕ್ಕೆ ಪಾವತಿಸಬೇಕಾಗುತ್ತದೆ.

8. ಕಾಲೇಜು ಬದಲಾಯಿಸಿಕೊಂಡಾಗ, ಪ್ರೊಗ್ರಾಮ್ ಅಥವಾ ಕೋರ್ಸ್‌ಗಳನ್ನು ಬದಲಾಯಿಸಿಕೊಳ್ಳಬಹುದೇ?

- ಇಲ್ಲ, ವಿದ್ಯಾರ್ಥಿಯು ವರ್ಗಾವಣೆ ಪ್ರವೇಶ ಪಡೆದಾಗ, ತಾನು ಹಿಂದೆ ಓದುತ್ತಿದ್ದ ಪ್ರೋಗ್ರಾಂ ಅನ್ನು ಮುಂದುವರೆಸಬೇಕಾಗುತ್ತದೆ.

9. ವರ್ಗಾವಣೆ ಪ್ರವೇಶ ನೀಡಲು ಕಾಲೇಜುಗಳು ಏನು ಮಾಡಬೇಕು?

- ವಿದ್ಯಾರ್ಥಿಯು ಹಿಂದೆ ಓದುತ್ತಿದ್ದ ಕಾಲೇಜು ಹಾಗೂ ವರ್ಗಾವಣೆ ಪ್ರವೇಶ ಬಯಸುವ ಕಾಲೇಜು ಎರಡರ ಪ್ರಾಂಶುಪಾಲರು ಒಪ್ಪಿ ನಿರಪೇಕ್ಷಣಾ ಪತ್ರ ನೀಡಬೇಕು. ವಿದ್ಯಾರ್ಥಿಯು ಹಿಂದೆ ಓದುತ್ತಿದ್ದ ಪ್ರೋಗ್ರಾಂ ಹಾಗೂ ಕೋರ್ಸ್‌ಗಳು ವರ್ಗಾವಣೆ ಪ್ರವೇಶ ನೀಡುವ ಕಾಲೇಜಿನಲ್ಲಿ ಲಭ್ಯವಿರಬೇಕು. ವರ್ಗಾವಣೆ ಪ್ರವೇಶ ಕಾಲೇಜಿನ ಆ ಪ್ರೋಗ್ರಾಂನ ಪ್ರವೇಶಮಿತಿಯಲ್ಲಿರಬೇಕು. ವರ್ಗಾವಣೆ ಪ್ರವೇಶಕ್ಕೆ ವಿಶ್ವವಿದ್ಯಾನಿಲಯದ ಪೂರ್ವಾನುಮತಿ ಕಡ್ಡಾಯವಾಗಿರುತ್ತದೆ.

10. ರಾಷ್ಟ್ರೀಯ ಶಿಕ್ಷಣ ನೀತಿಯ ಅಡಿಯಲ್ಲಿ ಯಾವುದೇ ವಿದ್ಯಾರ್ಥಿ ಯಾವುದೇ ವಿಷಯವನ್ನು ಓದಬಹುದೇ?

- ಯಾವುದೇ ವಿಷಯವನ್ನು ಮುಖ್ಯವಿಷಯವನ್ನಾಗಿ ಓದಲು ಪಿಯುಸಿ ಹಂತದಲ್ಲಿ ಓದಿರಬೇಕಾದ ವಿಷಯಗಳ ಕುರಿತು ಸ್ನಾತಕ ವಿನಿಮಯದಲ್ಲಿ ಉಲ್ಲೇಖಿಸಲಾಗಿದೆ.

11. ರಾಷ್ಟ್ರೀಯ ಶಿಕ್ಷಣ ನೀತಿಯ ಅಡಿಯಲ್ಲಿ ಯಾವುದೇ ಭಾಷಾ ವಿಷಯವನ್ನಾದರೂ ಓದಬಹುದೆ?

- ಹೌದು. ಸ್ನಾತಕ ಪದವಿಗಳ ಮೊದಲ ಎರಡು ವರ್ಷಗಳಲ್ಲಿ ಯಾವುದೇ ಎರಡು ಭಾಷಾ ವಿಷಯಗಳನ್ನು ಓದಬಹುದು.

12. ರಾಷ್ಟ್ರೀಯ ಶಿಕ್ಷಣ ನೀತಿಯ ಅಡಿಯಲ್ಲಿ ಭಾಷಾ ವಿಷಯಗಳನ್ನು ಬದಲಿಸಿಕೊಳ್ಳಬಹುದೆ?

- ಮೊದಲನೇ ವರ್ಷದ ಸ್ನಾತಕ ಪದವಿಯಲ್ಲಿ ಯಾವುದೇ ಎರಡು ಭಾಷಾ ವಿಷಯಗಳನ್ನು ಕಡ್ಡಾಯವಾಗಿ ಓದಿ, ಎರಡನೇ ವರ್ಷದ ಆರಂಭದಲ್ಲಿ ಭಾಷಾ ವಿಷಯಗಳನ್ನು ಬದಲಾಯಿಸಿಕೊಳ್ಳಬಹುದು. ಆದರೆ ಮೊದಲನೇ ಅಥವಾ ಮೂರನೇ ಸೆಮಿಸ್ಟರ್ ಅಂತ್ಯದಲ್ಲಿ ಭಾಷಾ ವಿಷಯಗಳನ್ನು ಬದಲಿಸಿಕೊಳ್ಳುವಂತಿಲ್ಲ.

13. ಮುಕ್ತ ಆಯ್ಕೆ ಪತ್ರಿಕೆ ಕಡ್ಡಾಯವೇ?

- ಹೌದು. ರಾಷ್ಟ್ರೀಯ ಶಿಕ್ಷಣ ನೀತಿಯ ಅಡಿಯಲ್ಲಿ ಮೊದಲನೇ ನಾಲ್ಕು ಸೆಮಿಸ್ಟರ್‌ಗಳಲ್ಲಿ ಮೂರರಲ್ಲಿ ಮುಕ್ತ ಆಯ್ಕೆ ಪತ್ರಿಕೆ ಓದುವುದು ಕಡ್ಡಾಯ.

14. ಯಾವುದೇ ಮುಕ್ತ ಆಯ್ಕೆ ಪತ್ರಿಕೆಯನ್ನಾದರೂ ಓದಬಹುದೆ?

- ಮುಕ್ತ ಆಯ್ಕೆ ಪತ್ರಿಕೆಗಳು ಅಂತರ್‌ಶಿಸ್ತೀಯವಾಗಿರಬೇಕಾಗಿರುತ್ತದೆ. ಉದಾಹರಣೆಗೆ ಬಿಎಸ್ಸಿ ವಿದ್ಯಾರ್ಥಿಯು ವಾಣಿಜ್ಯ, ವ್ಯವಹಾರ ಆಡಳಿತ, ಸಮಾಜ ವಿಜ್ಞಾನ, ಮಾನವಿಕ ಶಾಸ್ತ್ರ ಇತ್ಯಾದಿ ವಿಷಯಗಳಿಂದ ಮುಕ್ತ ಆಯ್ಕೆ ಪತ್ರಿಕೆಯನ್ನು ಆರಿಸಿಕೊಳ್ಳಬಹುದು. ಬಿಕಾಂ ವಿದ್ಯಾರ್ಥಿಯು ವಿಜ್ಞಾನ, ಸಮಾಜ ವಿಜ್ಞಾನ, ಮಾನವಿಕ ಶಾಸ್ತ್ರ ಇತ್ಯಾದಿ ವಿಷಯಗಳಿಂದ ಮುಕ್ತ ಆಯ್ಕೆ ಪತ್ರಿಕೆಯನ್ನು ಆರಿಸಿಕೊಳ್ಳಬಹುದು.

15. ಬಹುಹಂತದ ಆಗಮನ ಮತ್ತು ನಿರ್ಗಮನ ಎಂದರೇನು?

- ರಾಷ್ಟ್ರೀಯ ಶಿಕ್ಷಣ ನೀತಿಯ ಅಡಿಯಲ್ಲಿ ಯಾವುದೇ ಸ್ನಾತಕ ಪದವಿಯ ಪ್ರತೀ ವರ್ಷವನ್ನೂ ಯಶಸ್ವಿಯಾಗಿ ಪೂರ್ಣಗೊಳಿಸಿಕೊಂಡ ವಿದ್ಯಾರ್ಥಿ ಬಯಸಿದಲ್ಲಿ ಕಾರ್ಯಕ್ರಮದಿಂದ ತಾತ್ಕಾಲಿಕವಾಗಿ ನಿರ್ಗಮಿಸಬಹುದು. ಮತ್ತೆ ಕಾರ್ಯಕ್ರಮಕ್ಕೆ ಸೇರಿಕೊಳ್ಳಬಹುದು. ಮೊದಲನೇ ವರ್ಷ ಪೂರ್ಣಗೊಳಿಸಿಕೊಂಡ ವಿದ್ಯಾರ್ಥಿ ನಿರ್ಗಮಿಸಿದಲ್ಲಿ ಸರ್ಟಿಫಿಕೇಟ್ ನೀಡಲಾಗುತ್ತದೆ. ಎರಡನೇ ವರ್ಷ ಪೂರ್ಣಗೊಳಿಸಿಕೊಂಡ ವಿದ್ಯಾರ್ಥಿ ನಿರ್ಗಮಿಸಿದಲ್ಲಿ ಡಿಪ್ಲೋಮ ಪದವಿ ನೀಡಲಾಗುತ್ತದೆ. ಮೂರು ವರ್ಷ ಪೂರ್ಣಗೊಳಿಸಿಕೊಂಡು ನಿರ್ಗಮಿಸಿದಲ್ಲಿ ಸ್ನಾತಕ ಪದವಿ ನೀಡಲಾಗುತ್ತದೆ. ನಾಲ್ಕು ವರ್ಷಗಳ ಪದವಿ ಕಾರ್ಯಕ್ರಮ ಪೂರ್ಣಗೊಳಿಸಿಕೊಂಡು ನಿರ್ಗಮಿಸಿದರೆ, ಸ್ನಾತಕ ಆನರ್ಸ್ ಪದವಿ ನೀಡಲಾಗುತ್ತದೆ.

16. ಸ್ನಾತಕೋತ್ತರ ಪದವಿ ಕಾರ್ಯಕ್ರಮದ ಅವಧಿ ಎಷ್ಟು?

- ಎರಡು ಹಾಗೂ ಒಂದು ವರ್ಷಗಳ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳಿರುತ್ತವೆ. ಮೂರು ವರ್ಷದ ಸ್ನಾತಕ ಪದವಿ ಮುಗಿಸಿಕೊಂಡ ವಿದ್ಯಾರ್ಥಿ ಎರಡು ವರ್ಷದ ಸ್ನಾತಕೋತ್ತರ ಪದವಿ ಹಾಗೂ ನಾಲ್ಕು ವರ್ಷಗಳ ಸ್ನಾತಕ ಪದವಿ ಮುಗಿಸಿಕೊಂಡ ವಿದ್ಯಾರ್ಥಿಯು ಒಂದು ವರ್ಷದ ಸ್ನಾತಕೋತ್ತರ ಪದವಿ ಕಾರ್ಯಕ್ರಮಕ್ಕೆ ಸೇರಿಕೊಳ್ಳಬಹುದು.

17. ಎರಡು ವರ್ಷದ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳಲ್ಲೂ ಒಂದು ವರ್ಷದ ನಂತರ ನಿರ್ಗಮನ ಸಾಧ್ಯತೆ ಇದೆಯೇ?

- ಹೌದು. ಮೊದಲನೆ ವರ್ಷದ ಸ್ನಾತಕೋತ್ತರ ಪದವಿ ಕಾರ್ಯಕ್ರಮವನ್ನು ಪೂರ್ಣಗೊಳೊಸಿಕೊಂಡ ವಿದ್ಯಾರ್ಥಿ ನಿರ್ಗಮಿಸಿದರೆ, ಅದು ಪಿಜಿ ಡಿಪ್ಲೋಮ ಎಂದಾಗುತ್ತದೆ.

18. ವಿವಿಧ ಪದವಿ ಕಾರ್ಯಕ್ರಮಗಳಿಗೆ ಇರುವ ಉದ್ಯೋಗಾಔಕಾಶಗಳೇನು?

- ಪ್ರತೀ ಕಾಲೇಜು ಹಾಗೂ ವಿಶ್ವವಿದ್ಯಾನಿಲಯದ ವಿಭಾಗಗಳಲ್ಲಿ ಪ್ಲೇಸ್‌ಮೆಂಟ್ ಸೆಲ್ ಇದ್ದು, ವಿದ್ಯಾರ್ಥಿ ಉದ್ಯೋಗಾವಕಾಶಗಳ ಕುರಿತು ಆ ಕೋಶವನ್ನು ಸಂಪರ್ಕಿಸಬಹುದು.

19. ವಿದ್ಯಾರ್ಥಿಗಳಿಗೆ ಯಾವುದೇ ವಿಷಯದಲ್ಲಿ ತೊಂದರೆ ಅಥವಾ ಸಂದೇಹಗಳಿದ್ದಲ್ಲಿ ಏನು ಮಾಡಬೇಕು?

- ಪ್ರತೀ ಕಾಲೇಜು ಹಾಗೂ ವಿಶ್ವವಿದ್ಯಾನಿಲಯದಲ್ಲಿ ಸ್ಟುಡೆಂಟ್ ಗ್ರಿವೆನ್ಸ್ ರೆಡ್ರೆಸೆಲ್ ಇದ್ದು, ವಿದ್ಯಾರ್ಥಿ ತನ್ನ ಯಾವುದೇ ಸಂದೇಹ ಸಮಸ್ಯೆಗಳ ಕುರಿತು ಆ ಕೋಶವನ್ನು ಸಂಪರ್ಕಿಸಬಹುದು.